ಬಗೆಯ ದಾರಿಗಳು ಹಿಂದೆ ಬಂದಿವೆಯಾದರೂ, ಭಾಷೆ ಮತ್ತು ಪಾತ್ರಗಳ ಗಟ್ಟಿತನದಿಂದ ಮುಖ್ಯವಾಗುತ್ತವೆ. ಇಲ್ಲಿನ ಭಾಷೆ ಹೆಣ್ಣಿನ ಆಂತರ್ಯವನ್ನೂ ಆ ಮೂಲಕ ಸಮಾಜದ ಒಳ-ಹೊರಗುಗಳನ್ನು ಪ್ರಕಟಪಡಿಸುತ್ತದೆ. ಈ ಕ್ರಮವನ್ನು ಸಂಸ್ಕೃತಿಯ ವಿನ್ಯಾಸವೆಂದರೂ ನಡೆದೀತು.

ಹೆಣ್ಣು ಬದುಕಿನ ಸಾತತ್ಯ ಮತ್ತು ಪಲ್ಲಟಗಳನ್ನು ದಯಾ ಅವರ ಕಥೆಗಳು ಸೂಕ್ಷ್ಮವಾಗಿ ನಿರೂಪಿಸುತ್ತವೆ. ಯಾವುದೇ ಕೆಳಜಾತಿಯ ಬರಹಗಾರರಿಗೆ ತನ್ನ ಪೂರ್ವಿಕಲೋಕ ಅನೇಕ ಬಗೆಯಲ್ಲಿ ಶಕ್ತಿ ನೀಡುತ್ತದೆ. ಬಾಲ್ಯಲೋಕವನ್ನು ಮೀರಿದ ಅನುಭವಗಳು ಇಲ್ಲಿರಬಲ್ಲವು. ಬಾಲ್ಯಕ್ಕೆ ವಿಚಿತ್ರವಾದ ಸೆಳೆತ ಇರುತ್ತದೆ. ಆ ಮೂಲಕವೇ ಗ್ರಹಿಸುವ ಪೂರ್ವಿಕಲೋಕಕ್ಕೆ ದಟ್ಟವಾದ ಬದುಕಿನ ಸ್ಪರ್ಶ ಇರಬಲ್ಲದು. ಹಾಗಾಗಿಯೇ ಕೆಳಜಾತಿಗಳಿಗೆ ಸದ್ಯದ ವಿದ್ಯಮಾನಗಳನ್ನು ಗ್ರಹಿಸುವಾಗ ಪೂರ್ವಿಕಲೋಕ ತನ್ನದೇ ತಾತ್ವಿಕತೆಗಳನ್ನು ನೀಡಬಲ್ಲದು. ಈ ಕ್ರಮವನ್ನು ಹೊಸತಲೆಮಾರಿನ ಕಾವ್ಯ ಬಳಸಿಕೊಂಡಷ್ಟು ಈಗಿನವರ ಕಥನ ತೀವ್ರವಾಗಿ ಬಳಸಿಕೊಳ್ಳಬೇಕಾಗಿದೆ. ಗುರುಪ್ರಸಾದ್, ಸ್ವಾಮಿ ಪೊನ್ನಾಚಿ ತರದವರಲ್ಲಿ ಇದನ್ನು ಕ್ವಚಿತ್ತಾಗಿ ಕಾಣಬಹುದು. ದಯಾ ಅವರು ಈ ದಾರಿಯನ್ನು ಹೆಣ್ಣು ಜಗತ್ತಿನ ಮೂಲಕ ಎದುರಾಗುವ ಎಲ್ಲಾ ಸಾಧ್ಯತೆಗಳಿವೆ. 'ಜಗತ್ತಿನ ಸ್ವಲ್ಪ ಆ ಕಡೆಗೆ', 'ಉಪ್ಪುಚ್ಚಿ ಮುಳ್ಳು', 'ಹಲ್ಗೆ ಸಿದ್ದನೂ ಉರ್ಲಾಡಿ ಲಚ್ಚಿಯೂ' ಎಂಬ ಕಥೆಗಳನ್ನು ಗಮನಿಸಬಹುದು. ಎಷ್ಟೇ ಆಧುನಿಕರಾದರೂ ಇಲ್ಲಿನ ಪಾತ್ರಗಳ ನಿಜ ಸ್ಥಿತಿಗಳನ್ನು ಮರೆಯುವ ಹಾಗಿಲ್ಲ. 'ರೂಡಣ್ಣನ ಸಲ್ಲೇಖನ' ಕಥೆ ನಿಜವಾದ ಕಥೆಯ ಜಾಡಿಗೆ ಮರಳಿದಂತೆ ಕಾಣುತ್ತದೆ. ಆದರ್ಶತನವನ್ನೇ ಮೈಗೂಡಿಸಿಕೊಂಡ ರೂಡಣ್ಣ ತನ್ನ ಅಂತಿಮ ದಿನಗಳಲ್ಲಿ ವಾಸ್ತವ ಬದುಕನ್ನು ಅರ್ಥಮಾಡಿಕೊಳ್ಳುವ ರೀತಿಯನ್ನು ದಯಾ ಅವರು ಸರಿಯಾಗಿ ನಿರ್ವಹಿಸಿದ್ದಾರೆ. ಬಹುತೇಕರಂತೆ ಇವರೂ ಕೂಡ ಕಥೆಗಳಲ್ಲಿ ಕೇವಲ ವ್ಯಕ್ತಿಗಳನ್ನು ಪರಿಚಯಿಸುವ ಹಂತಕ್ಕೆ ತಲುಪುತ್ತಾರೆ. ತಮಗೆ ಅರಿವಿದ್ದ; ಅನುಭವಕ್ಕೆ ಬಂದ ತೀರ ತಳಸಮುದಾಯಗಳ ಬದುಕಿನ ಲಯಗಳಿಗೆ ತಕ್ಕ ಲೋಕದೃಷ್ಟಿಯನ್ನು ಸೃಷ್ಟಿಸಿಕೊಂಡರೆ ತಮ್ಮದೇ ದಾರಿಯಲ್ಲಿ ನಡೆಯಬಲ್ಲರು. ಕೇವಲ ಅನುಭವಗಳನ್ನು 'ಹೇಳಿದರೆ' ಕಲಾತ್ಮಕತೆಗೆ ಆಗುವ ಅಪಾಯಗಳನ್ನು ದಯಾ ಅವರು ಅರಿಯಬೇಕು. ಪ್ರಾದೇಶಿಕ ಭಾಷಿಕ ನುಡಿಗಟ್ಟುಗಳನ್ನು ಹೆಣ್ಣಿನ ಮೂಲಕ ಅನಾವರಣ ಮಾಡುವ ಇವರಿಗೆ ಬದುಕಿನ ಪಲ್ಲಟಗಳು ಸರಿಯಾಗಿ ಅರ್ಥವಾಗಿವೆ. ಆದರೆ, ಆ ಲೋಕವನ್ನು ಕಥನಕ್ಕೆ ತರುವ ಮುಂದಿನ ಹಾದಿ ಕೂಡ ಅಷ್ಟೇ ಸವಾಲು. ಸಂವೇದನೆಯ ದೃಷ್ಟಿಯಿಂದ ಇದೇ ಮಾತನ್ನು ಫಾತಿಮಾ ರಲಿಯಾ ಅವರಿಗೂ ಹೇಳಬಹುದು.

ಈಗಾಗಲೇ ಹೇಳಿದ ಹಾಗೆ 'ಇಂದಿನ' ಆಧುನಿಕ ಸ್ಥಿತಿಯಲ್ಲಿ ಮುಸ್ಲಿಂ 'ಸಂವೇದನೆ'ಯನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ಎಂಬ ಪ್ರಶ್ನೆಯೇ ನಮ್ಮನ್ನು ಹಲವು ದಿಕ್ಕಿಗೆ ಎಳೆಯಬಲ್ಲದು. ಕಳೆದ ಶತಮಾನದಲ್ಲಿ ನಿರ್ಮಾಣಗೊಂಡ ಈ ಬಗೆಯ ಕಥನಕ್ಕೆ ಒಂದು ವಿಶಿಷ್ಟ ಬಗೆಯ ಕೇಂದ್ರವಿತ್ತು. ಕೂಡು ಬದುಕಿನ ಆಯಾಮಗಳು ಮತ್ತು ವಿಘಟಿತ ಶಕ್ತಿಗಳು ಅಲ್ಲಿ ಢಾಳಾಗಿ ಕಾಣಿಸಿಕೊಂಡಿದ್ದವು. ಹೊಸ ತಲೆಮಾರು ಈಗಿನ ವಿದ್ಯಮಾನಗಳಲ್ಲಿ ಮತ್ತೊಮ್ಮೆ ಹರಿದ ಮಾನವೀಯ ಸಂಬಂಧಗಳನ್ನು ಹೆಣೆಯುವ ದಾರಿಯಲ್ಲಿದ್ದಾರೆಯೇ ಹೊರತು ತೀರಾ ಹೊಸಬಗೆಯ ಆಶಯಗಳನ್ನು ಹುಡುಕುತ್ತಿದ್ದಾರೆ ಎಂದೆನಿಸುವುದಿಲ್ಲ. ದಾದಾಪೀರ್ ತರದವರು ದಾಟುವ ಲಕ್ಷಣಗಳಿದ್ದರೂ ಮಸುಕಾಗಿವೆ. ಇಂದಿನ ಬಹುತೇಕ ಕಥೆಗಾರರಿಗೆ ಕೊರೊನಾ ಮತ್ತೊಮ್ಮೆ ಅವರ ಅಂತರಂಗಗಳನ್ನು ಸೀಳುವ ಸ್ಥಿತಿಗೆ ತಲುಪಿಸಿದ್ದು ಸುಳ್ಳಲ್ಲ. ಹೀಗಿದ್ದರೂ ಅಂದಿಗೂ, ಇಂದಿಗೂ 'ಸಂಶಯವೇ' ಸ್ಥಾಯಿಯಾಗಿ ಮುಂದುವರೆದಿರುವುದು ಕಾಣಬಹುದು. ಫಾತಿಮಾ ಅವರು ತಮ್ಮ ಕಥೆಗಳಿಗೆ ಆರಿಸಿಕೊಂಡಿರುವ ವಸ್ತು ಹೆಣ್ಣುಮಕ್ಕಳ ತಲ್ಲಣಗಳನ್ನೇ. ಮನುಷ್ಯ ಸಂಬಂಧಗಳನ್ನು 'ಬೇಲಿಯಾಚೆಗೂ ಬೆಳೆದವರು' ಕಥೆ ಚನ್ನಾಗಿ ಹಿಡಿದಿದೆ. ಶಿಕ್ಷಣ ಮತ್ತು ಉದ್ಯೋಗ ಇಲ್ಲಿನ ಪಾತ್ರಗಳನ್ನು ಎಷ್ಟರಮಟ್ಟಿಗೆ ಪಕ್ವಗೊಳಿಸಿದೆ? ಎಂಬ ಪ್ರಶ್ನೆಗೆ ಇವರ ಕಥೆಗಳಲ್ಲಿ ದಟ್ಟವಾದ ಅನುಭವಗಳೇ ಸಿಗುವುದಿಲ್ಲ. ಫಸ್ಕಾ (ಹೆಂಡತಿ ಗಂಡನಿಗೆ ಕೊಡುವ ವಿಚ್ಛೇದನ) ಬಗೆಗೆ ಪಾತ್ರವೊಂದು ದಿಟ್ಟವಾದ ನಿರ್ಧಾರ ತೆಗೆದುಕೊಂಡರೂ, ಅಲ್ಲಿಯೂ 'ತೀರ್ಮಾನಗಳು' ಮಸುಕಾಗಿವೆ. ಅಂದರೆ, ಮೂರನೇ ತಲೆಮಾರಿಗೆ ಸೇರಿದ ರಲಿಯಾ ಅವರು ಭಿನ್ನವಾದ ಆಶಯಗಳನ್ನು ನೀಡಬೇಕಾಗುತ್ತದೆ. ಆಧುನಿಕ ಮಾಧ್ಯಮಗಳನ್ನು ಕೇವಲ ಸಂಭಾಷಣೆಯ ಹಂತಕ್ಕೆ ತಂದರೂ ಕಷ್ಟವೇ. ನಿರೀಕ್ಷಿತ ಸಂಗತಿಗಳು ಕಥೆಗಳಾಗುವುದು ತಪ್ಪಲ್ಲ; ಆದರೆ ಅವುಗಳಿಗೆ ಬದುಕಿನ ಕಸುವನ್ನು ತುಂಬಬೇಕು. ಇಲ್ಲಿನ ಮುಸ್ಲಿಂ ಹೆಣ್ಣುಜೀವಗಳು ತೀರಾ ಪಾರಂಪರಿಕ ಸಮಸ್ಯೆಗಳಿಂದ ಪಾರಾಗುವರೇ? ಎಂಬ ಪ್ರಶ್ನೆಯು ಇದೆ. ಬರವಣಿಗೆಯ